# ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 819/2015

ಸಾಕ್ಷಿಗೆ ದಿನಾಂಕ 14-08-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 27 P.W.: 5

| | | |
|---|---|---|
| ಹೆಸರು | ಃ | ಡಾಃ ಡಿ. ಭಾಸ್ಕರ್ |
| ತಂದೆಯ ಹೆಸರು | ಃ | ದೇವೇಂದ್ರಪ್ಪ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | ಃ | ವೈದ್ಯಾಧಿಕಾರಿಗಳು |
| ವಾಸ ಸ್ಥಳ | ಃ | ಹೊಸಪೇಟೆ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 17-09-2010 ರಿಂದ 24-04-2017 ರವರೆಗೆ ನಾನು ತಂಬ್ರಹಳ್ಳಿ ಪ್ರಾ ಆ ಕೇಂದ್ರದಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06-12-2013 ರಂದು ಮದ್ಯಾಹ್ನ ಸುಮಾರು 2-45 ಗಂಟೆ ಸುಮಾರಿಗೆ ಚಾಸಾ-7, ಚಾಸಾ-1 ರವರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದರು. ಇಬ್ಬರು ಗಾಯಾಳುಗಳು ನಮ್ಮ ಮೇಲೆ ಹಲ್ಲೆಯಾಗಿದೆ ಚಿಕಿತ್ಸೆ ಕೊಡಿ ಅಂತಾ ಆಸ್ಪತ್ರೆಗೆ ಬಂದಿದ್ದರು. ಚಾಸಾ-7 ರವರನ್ನು ಪರೀಕ್ಷಿಸಿ ನೋಡಲಾಗಿ ಅವರಿಗೆ ಎಡ ತೊಡೆಯ ಎಡಭಾಗದ ಮೇಲೆ ತೆರಚಿದ ಗಾಯ ಇತ್ತು. ಚಾಸಾ-1 ರವರಿಗೆ ಪರೀಕ್ಷಿಸಿ ನೋಡಲಾಗಿ ಅವರಿಗೆ ಎಡ ಮೊಣಕೈ ಮೇಲೆ ತೆರಚಿದ ಗಾಯ, ಒಳಪೆಟ್ಟು ಮತ್ತು ನೋವಿರುತ್ತದೆ, ಬಲಗೈಗೆ ಒಳಪೆಟ್ಟು, ನೋವಿರುತ್ತದೆ, ಬೆನ್ನಿನ ಮೇಲೆ ಕುತ್ತಿಗೆಯ ಕೆಳಭಾಗದಲ್ಲಿ ಒಳಪೆಟ್ಟು ನೋವಿರುತ್ತದೆ ಮತ್ತು ಎಡಮೊಣಕಾಲಿನ ಮೇಲೆ ಒಳಪೆಟ್ಟು ನೋವು ಇರುತ್ತದೆ. ಅವರಿಗೆ ನಾನು ಚಿಕಿತ್ಸೆ ನೀಡಿರುತ್ತೇನೆ ಸದರಿ ಗಾಯಗಳು ನನ್ನ ಅಭಿಪ್ರಾಯದಂತೆ ಸಾದಾ ಸ್ವರೂಪದ ಗಾಯಗಳಾಗಿರುತ್ತವೆ. ಆ ಬಗ್ಗೆ ನಾನು ಪ್ರಮಾಣಪತ್ರಗಳನ್ನು ನೀಡಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿಯು ಸದರಿ ಪ್ರಮಾಣಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-12 ಮತ್ತು 13 ಎಂದು ಹಾಗೂ ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-12 ಎ ಮತ್ತು 13 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲು. ಆರೋಪಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ಸಾಮಾನ್ಯವಾಗಿ ಜಮೀನಿನಲ್ಲಿ ಗಿಡಗಂಟೆಗಳ ಮಧ್ಯೆ ಓಡಾಡುವಾಗ ಮುಳ್ಳುಗಳು ತೆರಚಿದರೆ ನಿಪಿ-12 ರಂತೆ ಗಾಯಗಳಾಗುವ ಸಾಧ್ಯತೆ ಇರುತ್ತದೆಂದರೆ ಸರಿಯಲ್ಲ. ಜಮೀನಿನಲ್ಲಿ

ಹೋಗುವಾಗ ಗಟ್ಟಿ ನೆಲದಲ್ಲಿ ಎಡವಿ ಬಿದ್ದಾಗ ಕೈಗಳಿಗೆ ಮತ್ತು ಮೊಣಕಾಲಿಗೆ ಪೆಟ್ಟಾಗುವ ಸಾಧ್ಯತೆ ಇರುತ್ತದೆಂದರೆ ಸರಿ. ಭಾರವಾದ ವಸ್ತುಗಳನ್ನು ಹೊತ್ತುಕೊಂಡು ಹೋಗುವಾಗ ನಿಪಿ-13 ರಲ್ಲಿ ವಿವರಿಸಿದಂತೆ ಕುತ್ತಿಗೆಯ ಕೆಳಭಾಗಕ್ಕೆ ಗಾಯವಾಗುವ ಸಾಧ್ಯತೆ ಇರುತ್ತದೆಂದರೆ ಸರಿಯಲ್ಲ. ಆರೋಪಿತನು ಚಾಸಾ-1 ಮತ್ತು 7 ರವರ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಅವರಿಗೆ ಯಾವುದೇ ಗಾಯವಾಗಿಲ್ಲ, ನಾನು ಚಾಸಾ-1 ಮತ್ತು 7 ರವರಿಗೆ ಯಾವುದೇ ರೀತಿಯಿಂದ ಚಿಕಿತ್ಸೆ ಮಾಡಿಲ್ಲ, ಪೋಲೀಸರಿಗೆ ಅನುಕೂಲವಾಗಲು ಸುಳ್ಳು ಪ್ರಮಾಣಪತ್ರಗಳನ್ನು ನೀಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ